**ಬುದ್ಧ:** "ಹೌದು, ನಾನು ಯಾವಾಗಲೋ ಆಕೆಯ ಧೈರ್ಯದ ಆಳವನ್ನು ಅರಿತಿದ್ದೇನೆ. ಅಮ್ಮ! ನೀನು ಮತ್ತು ಯಶೋಧರೆಯರಿಬ್ಬರೂ ಧೈರ್ಯದ ಗಣಿಗಳಾಗಿದ್ದೀರಿ. ನೀವು ನಿಮ್ಮ ಪತಿಗೆ ಬೆಂಬಲ ಮತ್ತು ಸಹಕಾರವನ್ನು ನೀಡುವುದರ ಜೊತೆಗೆ, ಅವರನ್ನು ಆಳವಾಗಿ ಅರ್ಥಮಾಡಿಕೊಂಡಿದ್ದೀರಿ. ಅದರ ಜೊತೆಗೆ ಎಲ್ಲರಿಗೂ ಶಕ್ತಿ ಮತ್ತು ದೃಢತೆಗಳ ಆದರ್ಶಗಳಾಗಿದ್ದೀರಿ. ನಿಮ್ಮಂಥ ತಾಯಿಯನ್ನು ಪಡೆದಿರುವುದು ನನ್ನ ಜೀವನದ ಪರಮ ಭಾಗ್ಯ. ಇದರಿಂದ ನನ್ನ ಜೀವನದ ಧ್ಯೇಯವನ್ನು ಸಾಧಿಸು ವುದು ನನ್ನಿಂದ ಸುಲಭವಾಯಿತು."

ಯಶೋಧರೆ ಬುದ್ಧನತ್ತ ನೋಡುತ್ತಾ ಮುಗುಳ್ನಗುತ್ತಿದ್ದಳು. ಏನನ್ನೂ ಮಾತನಾಡಲಿಲ್ಲ.

ಮಹಾರಾಜ ಹೇಳಿದನು, "ಮಗನೆ, ಮೋಕ್ಷಸಾಧನೆಯ ಬಗ್ಗೆ ನೀನು ಆರಿಸಿದ ಮಾರ್ಗದ ಬಗ್ಗೆ ನನಗೆ ಸ್ವಲ್ಪ ತಿಳಿಸಿದ್ದೀಯೆ. ಅದನ್ನು ಇವರಿಗೆಲ್ಲ ಮತ್ತೆ ತಿಳಿಸುತ್ತೀಯಾ?"

ಬುದ್ಧನು ಸರಿಯಾದ ಸಾಧನೆಯ ಮಾರ್ಗವನ್ನು ಕಂಡು ಹಿಡಿಯಲು ತಾನು ನಡೆಸಿದ ದೀರ್ಘವಾದ ಹೋರಾಟವನ್ನು ಸಂಕ್ಷಿಪ್ತವಾಗಿ ವಿವರಿಸಿದನು. ಅನಂತರ ಪರ್ವತದ ಮೇಲೆ ರಾಜ ಬಿಂಬಸಾರನ ಭೇಟಿ ಮತ್ತು ಉರುವಲ ಎಂಬ ಹಳ್ಳಿಯ ಬಡಮಕ್ಕಳ ಬವಣೆ – ಇವುಗಳ ಬಗ್ಗೆಯೂ ತಿಳಿಸಿದನು. ಹಾಗೆಯೇ ತನ್ನ ಜೊತೆಗೆ ಸಾಧನೆಯನ್ನು ಮಾಡಿದ ತನ್ನ ಐದು ಮಿತ್ರರ ಬಗ್ಗೆ, ಭಿಕ್ಷುಗಳಿಗೆ ರಾಜಗೃಹದಲ್ಲಿ ದೊರೆತ ಭವ್ಯವಾದ ಸ್ವಾಗತದ ಬಗ್ಗೆ ಕೂಡ ತಿಳಿಸಿದನು. ಇವೆಲ್ಲವನ್ನೂ ಎಲ್ಲರೂ ತನ್ಮಯರಾಗಿ ಆಲಿಸಿದರು. ರಾಹುಲನು ಕೂಡ ಮಿಸುಗಾಡಲಿಲ್ಲ. ಬುದ್ಧನು ತನ್ನ ಸಾಧನೆಯ ಬಗ್ಗೆ ಹೆಚ್ಚೇನೂ ವಿವರವನ್ನು ನೀಡಲಿಲ್ಲ. ಆದರೂ ಅವನ ಮಾತುಗಳು ಕೇಳುಗರಲ್ಲಿ, ತಾವೂ ಕೈವಲ್ಯ ಜ್ಞಾನವನ್ನು ಪಡೆಯಬೇಕೆಂಬ ಅಭಿಲಾಷೆಯನ್ನು ಮೂಡಿಸಿದವು. ಬುದ್ಧನ ಮಾತುಗಳಿಗೆ ಅಂತಹ ಶಕ್ತಿ ಇತ್ತು.

ಅಷ್ಟರಲ್ಲಿ ಪರಿಚಾರಿಕೆಯೊಬ್ಬಳು ಉದ್ಯಾನವನಕ್ಕೆ ಬಂದು, ಗೌತಮಿಯ ಕಿವಿಯಲ್ಲಿ ಏನನ್ನೋ ಹೇಳಿದಳು. ರಾಣಿಯು ಭೋಜನ ಸಿದ್ಧವಾಗಿದೆಯೆಂದು ಹೇಳುತ್ತ, ಎಲ್ಲರನ್ನೂ ಊಟಕ್ಕೆ ಆಹ್ವಾನಿಸಿದಳು. ಆ ಸಮಯಕ್ಕೆ ಬುದ್ಧನ ತಮ್ಮನಾದ ನಂದನ ಆಗಮನವಾಯಿತು. ಬುದ್ಧ ಅವನನ್ನು ಉದ್ದೇಶಿಸಿ ಹೀಗೆ ಹೇಳಿ ದನು: "ನಂದ, ನಾನು ನಿನ್ನನ್ನು ಬಿಟ್ಟು ಹೋದಾಗ, ನಿನಗೆ ಕೇವಲ ಹದಿನೈದು ವರ್ಷವಷ್ಟೇ. ಈಗ ನೀನು ಬೆಳೆದು ದೊಡ್ಡವ ನಾಗಿದ್ದೀಯೆ."

ನಂದನು ನಸುನಕ್ಕನು. ರಾಣಿಯು ಅವನನ್ನು, "ನಂದ, ನಿನ್ನ ಅಣ್ಣನನ್ನು ಸರಿಯಾಗಿ ಸತ್ಕರಿಸು. ಅವನು ಈಗ ಒಬ್ಬ ಗೌರವಾನ್ವಿತ ಭಿಕ್ಷು" ಎಂದಳು. ನಂದನು ಬಾಗಿ ವಂದಿಸಿ ತನ್ನ ಗೌರವವನ್ನು ಸೂಚಿಸಿದನು. ಎಲ್ಲರೂ ಕಲ್ಲುಹಾಸಿನ ಮೇಲೆ ಕುಳಿತರು. ರಾಜನು ಬುದ್ಧನನ್ನು ಕುರಿತು, "ನೀನು ಇಂದು ಬೆಳಿಗ್ಗೆ ಭಿಕ್ಷೆ ಬೇಡಿದಾಗ ಏನು ದೊರೆಯಿತು?" ಎಂದನು. ಬುದ್ಧನು, "ನನ್ನ ಭಿಕ್ಷಾಪಾತ್ರೆಯಲ್ಲಿ ಒಂದು ಆಲೂಗಡ್ಡೆ ದೊರೆಯಿತು. ಆದರೆ ನಾಗಸಾಮಲನಿಗೆ ಏನೂ ದೊರೆಯಲಿಲ್ಲ" ಎಂದನು.

ಬುದ್ಧ ಹಾಗೂ ನಾಗಸಮಲರ ಮುಂದೆ ಥಳಥಳಿಸುವ ತಟ್ಟೆಗಳಿದ್ದರೂ, ಇಬ್ಬರೂ ತಮ್ಮ ಭಿಕ್ಷಾಪಾತ್ರೆಗಳನ್ನು ಮುಂದೆ ಒಡ್ಡಿ ಭಿಕ್ಷೆಗಾಗಿ ಕಾದು ಕುಳಿತರು. ಶುದ್ಧೋಧನನು ರಾಣಿಯ ಸಹಾಯ ದಿಂದ, ಘಮಘಮಿಸುವ ಅನ್ನ ಮತ್ತು ಇತರ ವಸ್ತುಗಳನ್ನು ಅವರ ಭಿಕ್ಷಾಪಾತ್ರೆಗೆ ಹಾಕಿದನು. ಅವರು ಅವೆಲ್ಲವನ್ನೂ ಕಲಸಿಕೊಂಡು ನಿಧಾನವಾಗಿ ಊಟಮಾಡಿದರು. ಇತರರು ಸಂಕೋಚದಿಂದಲೇ ತಮ್ಮ ತಮ್ಮ ತಟ್ಟೆಗಳಿಗೆ ಬಡಿಸಿಕೊಂಡು ಊಟ ಮಾಡಿದರು. ಊಟದ ನಂತರ ಮತ್ತೆ ಎಲ್ಲರೂ ಕಲ್ಲುಹಾಸಿನ ಮೇಲೆ ಕುಳಿತರು. ಎಲ್ಲರ ಕೋರಿಕೆಯ ಮೇರೆಗೆ ಬುದ್ಧನು ತನ್ನ ಸಾಧನೆಯ ದಿನಗಳ ಬಗ್ಗೆ ಮತ್ತಷ್ಟು ಮಾಹಿತಿಯನ್ನು ನೀಡಿದನು. ಬುದ್ಧನು ಅರಣ್ಯದಲ್ಲಿ ಕಟ್ಟಿದ ಒಂದು ಕುಟೀರದ ಬಗ್ಗೆ ಕೇಳಿ ತಿಳಿದು, ರಾಜನು ಅಂಥಹುದೇ ಇನ್ನೊಂದು ಕುಟೀರವನ್ನು ನ್ಯಗ್ರೋಧವನದಲ್ಲಿ ಕಟ್ಟಿಸಲು ನಿರ್ಧರಿಸಿದನು. ಅದರಲ್ಲಿ ಬುದ್ಧನು ಕೆಲವು ತಿಂಗಳ ಕಾಲ ನೆಲೆಸಿ ಸಾಧನೆ ಮಾಡುತ್ತ, ನಮ್ಮೆಲ್ಲರ ಜೊತೆಗೇ ಇರಲಿ ಎಂದು ಆಶಿಸಿದನು. ಬೇರೆಯವರೂ ಈ ಕೋರಿಕೆಗೆ ದನಿಗೂಡಿಸಿದರು.

ಕೊನೆಗೆ ಬುದ್ಧನು ವೇಳೆಯಾಗುತ್ತಿರುವುದನ್ನು ಗಮನಿಸಿದನು. ವನದಲ್ಲಿ ಬೀಡುಬಿಟ್ಟಿರುವ ತನ್ನ ಭಿಕ್ಷುಗಳನ್ನು ಕೂಡುವ ಸಮಯ ವಾಯಿತೆಂದು ಮೇಲೆದ್ದನು. ಎಲ್ಲರೂ ಅವನನ್ನು ಬೀಳ್ಕೊಡಲು ಅವನೊಂದಿಗೆ ರಾಜದ್ವಾರದವರೆಗೂ ಹೋದರು. ರಾಜನು, "ನೀನು ಒಂದು ದಿನ ನಿನ್ನೆಲ್ಲ ಭಿಕ್ಷುಗಳೊಂದಿಗೆ ನಮ್ಮಲ್ಲಿ ಭಿಕ್ಷೆ ಸ್ವೀಕರಿಸಬೇಕು" ಎಂದು ಆಹ್ವಾನಿಸಿದನು. ಬುದ್ಧನು ಅದಕ್ಕೆ ಸಂತೋಷದಿಂದ ಒಪ್ಪಿಕೊಂಡನು.

ಔತಣದ ದಿನವೂ ನಿಗದಿಯಾಯಿತು. ಯಶೋಧರೆಯು ಬುದ್ಧ ಮತ್ತು ಕಲುವಾಯಿಯನ್ನು ತನ್ನ ಅರಮನೆಗೆ, ಖಾಸಗಿ ಭೋಜನಕ್ಕೆ ಆಹ್ವಾನಿಸುವ ಇಚ್ಛೆಯನ್ನು ಅರುಹಿದಳು. ಬುದ್ಧನು ಆ ಆಹ್ವಾನವನ್ನೂ ಮನ್ನಿಸಿದನು. ಆದರೆ ಸ್ವಲ್ಪ ದಿನಗಳ ಕಾಲ ಕಾಯು ವಂತೆ ಸೂಚಿಸಿದನು. ರಾಜ ಬುದ್ಧನನ್ನು ಅವನಿದ್ದ ನ್ಯಗ್ರೋಧವನಕ್ಕೆ ರಥದಲ್ಲಿ ಕಳಿಸಿಕೊಡಲು ಬಯಸಿದನು. ಬುದ್ಧನು ಬೇಡವೆಂದು ನಡೆದುಹೋಗಲು ಇಚ್ಛಿಸಿದನು. ಎಲ್ಲರೂ ಕೈಮುಗಿದು ಇಬ್ಬರು ಭಿಕ್ಷುಗಳಿಗೂ ವಿದಾಯ ಹೇಳಿದರು. ತಮ್ಮ ಹಳೆಯ ಸಿದ್ಧಾರ್ಥನು ಅರಮನೆಗೆ ಭೋಜನಕ್ಕೆ ಬರುವ ವಿಷಯ ಕಪಿಲವಸ್ತುವಿನಲ್ಲಿ ಎಲ್ಲೆಡೆ ಹರಡಿತು. ಬಹಳಷ್ಟು ಜನ ಅವನು ರಾಜ್ಯದಲ್ಲಿಯೇ ಉಳಿದು, ರಾಜನಾಗುವನೆಂದು ಆಶಿಸಿದರು.

ರಾಜ ಶುದ್ಧೋಧನನು ನಗರವನ್ನು ತಳಿರುತೋರಣಗಳಿಂದ ಸಿಂಗರಿಸುವಂತೆ ಹೇಳಿದನು. ಪ್ರಜೆಗಳೂ ಉತ್ಸಾಹದಿಂದ ತಮ್ಮ ಸ್ವಂತ ಕುಟುಂಬದ ಹಬ್ಬವನ್ನು ಆಚರಿಸುವಂತೆ ಮನೆಗಳಿಗೆ ಬಣ್ಣ ಹಚ್ಚಿ ಸಿಂಗರಿಸಿದರು. ಇಡೀ ಪಟ್ಟಣದಲ್ಲಿ ಸಂಭ್ರಮ ತುಂಬಿ ತುಳು ಕಾಡುತ್ತಿತ್ತು. ಮಕ್ಕಳು ಕೂಡ ಹೊಸ ಬಟ್ಟೆ ಉಟ್ಟುಕೊಂಡು, ಭಿಕ್ಷುಗಳ ತಂಡವು ಮೆರವಣಿಗೆಯಲ್ಲಿ ಬರುವುದನ್ನು ಕಾಣಲು ಸಾಲುಸಾಲಾಗಿ ನಿಂತಿದ್ದರು. ಬುದ್ಧನ ಪುನರಾಗಮನವು ನಗರವಾಸಿಗಳ ಮಾತುಕತೆಯ ಮುಖ್ಯವಿಷಯವಾಯಿತು.

(ಮುಂದುವರೆಯುವುದು)